**ಪಾಠ–9** **ಫೆಬ್ರವರಿ 23–**

# ಸೈತಾನ ಮತ್ತು ಅವನ ಮಿತ್ರರು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಪ್ರಕಟನೆ 13, ಪ್ರಕ 17:8, ದಾನಿಯೇಲ 7:24, 2 ಥೆಸ 2:2–12, ಪ್ರಕ 12:14–16, 1 ಅರಸು 18:38.

**ಸ್ಮರಣವಾಕ್ಯ : "ಆಗ ಘಟಸರ್ಪನು ಸ್ತ್ರೀಯ ಮೇಲೆ ಕೋಪಿಸಿಕೊಂಡು ಆಕೆಯ ಸಂತಾನದವರಲ್ಲಿ ಉಳಿದವರ ಮೇಲೆ ಅಂದರೆ ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವವರ ಮೇಲೆ ಯುದ್ಧ ಮಾಡುವುದಕ್ಕೆ ಹೊರಟು ಸಮುದ್ರ ತೀರಿದ ಮರಳಿನ ಮೇಲೆ ನಿಂತನು– ಪ್ರಕ 12:17**.

ಪ್ರಕಟನೆ 12ನೇ ಅಧ್ಯಾಯವು ದೇವಜನರ ಮೇಲೆ ಸೈತಾನನು ಮಾಡುವ ಆಕ್ರಮಣವನ್ನು ವರ್ಣಿಸುತ್ತದೆ, ಮಾತ್ರವಲ್ಲದೆ 1260 ವರ್ಷಗಳ ಕಾಲ ಸಭೆಯನ್ನು ಅನ್ಯಧಾರ್ಮಿಕ ರೋಮು ಮತ್ತು ಪೋಪುವಿನ ರೋಮು ಮಾಡುವ ಹಿಂಸೆಯನ್ನು ಸಹ ಒಳಗೊಂಡಿದೆ (ಕ್ರಿ.ಶ. 538 ರಿಂದ 1798 ರವರೆಗೆ ಪ್ರಕ 12:6, 13,14 ಮತ್ತು 7ನೇ ಅಧ್ಯಾಯ, ಮಂಗಳವಾರ) ಪ್ರಕಟನೆ 13ನೇ ಅಧ್ಯಾಯವು ಕ್ರೈಸ್ತ ಇತಿಹಾಸದಲ್ಲಿ ಸೈತಾನನು ತನ್ನ ಮೈತ್ರಿಕೂಟದೊಂದಿಗೆ ಸೇರಿ ಮಾಡುವ ಆಕ್ರಮಣಗಳನ್ನು ವಿವರವಾಗಿ ವರ್ಣಿಸುತ್ತದೆ. ಮೈತ್ರಿಯಲ್ಲಿ ಎರಡನ್ನೂ ಮೃಗಗಳು

ಕಡೆಯಕಾಲದಲ್ಲಿ ಒಂದುಗೂಡಿ ಲೋಕದ ಮೈತ್ರಿಯನ್ನು ಗೆಲ್ಲುವ ಪ್ರಯತ್ನ ಮಾಡುತ್ತವೆ.

ಎಚ್ಚರಿಕೆಯ ಮಾತು ಅತ್ಯಗತ್ಯವಾಗಿದೆ. ಈಗಾಗಲೇ ನೆರವೇರುವ ಪ್ರವಾದನೆಗಳನ್ನು ಅರ್ಥೈಸುವುದು ಬಹಳ ಸುಲಭ, ಮಂಗಳವಾರದ ಪಾಠದಲ್ಲಿ ನಾವು ಕಲಿಯುವ ಹಾಗೆಯೇ ಇನ್ನೂ ನೆರವೇರಬೇಕಾದ ಪ್ರವಾದನೆ ವಿಷಯದಲ್ಲಿ ನಾವು ಬಹಳ ಎಚ್ಚರವಹಿಸಬೇಕು.

ದೇವರು ನಾವು ಆಶ್ಚರ್ಯಪಟ್ಟುಕೊಳ್ಳದಿರುವಂತೆ ಅಂತ್ಯಕಾಲದಲ್ಲಿ ಏನು ನಡೆಯುತ್ತದೆ ಎಂಬುದನ್ನು ತೋರಿಸುತ್ತಾನೆ. ಆದರೆ ನಾವು ತಿಳಿಯ ಬಯಸುವುದನ್ನೆಲ್ಲಾ ನಮಗೆ ತಿಳಿಸುವುದಿಲ್ಲ. ಈ ಪ್ರವಾದನೆಗಳು ಅಂತ್ಯದಲ್ಲಿ ಏನಾಗುತ್ತದೆಯೆಂದು ಹೇಳುತ್ತವೆ. ಆದರೆ ನಿಖರವಾಗಿ ಯಾವಾಗ ಹೇಗೆ ಬಿಚ್ಚುತ್ತಾ ಬರುತ್ತವೆ (ನಡೆಯುತ್ತವೆ) ಎನ್ನುವುದನ್ನು ಹೇಳುವುದಿಲ್ಲ. ಆದುದರಿಂದ ಪ್ರವಾದನೆ ಹೇಳಿರುವುದಕ್ಕಿಂತ ಹೆಚ್ಚಿನದನ್ನು ಊಹಿಸಿಕೊಳ್ಳಬಾರದು.

ಪ್ರಕಟನೆಯಲ್ಲಿ ಹೇಳಿರುವ ಪ್ರವಾದನೆಗಳಿಗೆ ನಾವು ಇಂದು ಹೇಗೆ ಜೀವಿಸಬೇಕು ಮತ್ತು ಮುಂದೆ ಆಗುವುದಕ್ಕೆ ಹೇಗೆ ಸಿದ್ಧಗೊಳ್ಳಬೇಕೆಂಬ ಪ್ರಾಯೋಗಿಕ ಉದ್ದೇಶವಿದೆ ಎಂಬುದನ್ನು ನಾವು ಎಂದಿಗೂ ಮರೆಯಬಾರದು. ಈ ಪಾಠವನ್ನು ಮಾರ್ಚ್ 2ನೇ ತಾರೀಖಿನ ಸಬ್ಬತ್ತಿಗಾಗಿ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಫೆಬ್ರವರಿ 24**

## ಸಮುದ್ರದಿಂದ ಏರಿಬಂದ ಮೃಗ

ಓದಿರಿ : ಪ್ರಕ 13:1–4,8 ನ್ನು ಮತ್ತು ಪ್ರಕಟನೆ 17:8ನ್ನು ಓದಿರಿ. ಈ ಮೃಗದ ಮುಖ್ಯ ಲಕ್ಷಣಗಳೇನು ಮತ್ತು ಇದರ ಅಸ್ತಿತ್ವದ ಹಂತಗಳಾವುವು?

ಯೋಹಾನನು ದರ್ಶನದಲ್ಲಿ ಸಮುದ್ರದಿಂದ ಏರಿಬರುವ ಒಂದು ವಿಲಕ್ಷಣವಾದ ಮೃಗವನ್ನು ಕಂಡನು. ಇಲ್ಲಿ ಮೃಗವೆಂಬುದು ರಾಜಕೀಯ ಅಧಿಕಾರಕ್ಕೆ ಸಂಕೇತವಾಗಿದೆ (ಪ್ರತಿನಿಧಿಸುತ್ತದೆ). ರೋಮ್ ಸಾಮ್ರಾಜ್ಯವು ಪತನವಾದ ನಂತರ ಜನಭರಿತ ಯೂರೋಪಿನ ರಾಷ್ಟ್ರಗಳನ್ನು ಸಾಂಕೇತಿಕವಾಗಿ

ಸಮುದ್ರವೆಂದು ಕರೆಯಲ್ಪಟ್ಟಿದೆ (ಪ್ರಕ 17:15).

ಈ ಮೃಗವು ನೀರಿನಿಂದ ಬಂತೆಂದು ವಿವರಿಸುತ್ತಾನೆ. ಈ ಮೃಗಕ್ಕೆ ಏಳು ತಲೆಗಳು, ಹತ್ತು ಕೊಂಬುಗಳು, ಇದು ಅನ್ಯಧಾರ್ಮಿಕ ರೋಮ್‌ಗೆ ಸೇರಿರುವಂಥದ್ದು ಎಂದು ಪ್ರಕ 12:3,4 ರಲ್ಲಿ ಇದೆ. ಮೃಗದ ತಲೆಯ ಮೇಲೆ ದೇವದೂಷಣೆಯ ಹೆಸರುಗಳಿವೆ. ಅದರ ಕೊಂಬುಗಳ ಮೇಲೆ ರಾಜಮುಕುಟ (ಕಿರೀಟ)ಗಳಿವೆ.

ಮೃಗದ ತಲೆಗಳು ಎಂದರೆ ದೇವಜನರನ್ನು ಇತಿಹಾಸದಾದ್ಯಂತ ಹಿಂಸಿಸಲು ಸೈತಾನನು ಉಪಯೋಗಿಸುವ ರಾಜ್ಯಗಳು (ಪ್ರಕ 17:9–11). ಮೃಗವು ದೈವ ಪದವಿಯನ್ನು ಹೊಂದ ಬಯಸುವುದನ್ನು 'ದೇವದೂಷಣೆ ಹೆಸರುಗಳು' ಎಂದು ಸೂಚಿತವಾಗಿದೆ. ರೋಮ್ ಸಾಮ್ರಾಜ್ಯದ ಪತನದ ನಂತರ ಉಂಟಾಗುವ ಹತ್ತು ರಾಜ್ಯಗಳನ್ನು ದಾನಿಯೇಲ 7:24 ಹತ್ತು ಕೊಂಬುಗಳೆಂದು ಸಾಂಕೇತಿಕವಾಗಿ ಹೇಳಿದೆ.

ಸಮುದ್ರ ಮೃಗದ ಈ ಎಲ್ಲಾ ಗುಣಲಕ್ಷಣಗಳು ರೋಮ್ ಸಾಮ್ರಾಜ್ಯದಿಂದ ಬಂದ ಪೋಪತ್ವದ ಬೆಳವಣಿಗೆಯನ್ನು ಸೂಚಿಸುತ್ತದೆ. ಸಮುದ್ರದಿಂದ ಏರಿ ಬಂದ ಮೃಗವು ಚಿರತೆಯಂತಿತ್ತು. ಅದರ ಕಾಲುಗಳು ಕರಡಿಯ ಕಾಲಿನಂತೆಯೂ ಬಾಯಿ ಸಿಂಹದಂತೆಯೂ ಇತ್ತು. ದಾನಿಯೇಲ 7:2–7 ರಲ್ಲಿ ಈ ವಿಲಕ್ಷಣವಾದ ಮೃಗವು ನಾಲ್ಕು ಮೃಗಗಳ ಗುಣಸ್ವಭಾವವನ್ನು ಹೊಂದಿತ್ತು (ಲೋಕದ ನಾಲ್ಕು ರಾಜ್ಯಗಳನ್ನು ಸಂಕೇತಿಸುತ್ತದೆ).

ಬಾಬಿಲೋನು, ಮೇದ್ಯಪಾರಸೀಯ, ಗ್ರೀಸ್ ಮತ್ತು ರೋಮು, ಯೋಹಾನನು ಇವುಗಳನ್ನು ಹಿಂದುಮುಂದಾಗಿ ಪಟ್ಟಿ ಮಾಡಿದ್ದಾನೆ. ಅವನಿಗಿದ್ದ ಮೊದಲ ಶತಮಾನದ ದೃಷ್ಟಿಯಲ್ಲಿ ಸಮುದ್ರದಿಂದ ಏರಿಬಂದ ಮೃಗವು ದಾನಿಯೇಲ 7 ನಾಲ್ಕನೇ ಮೃಗಕ್ಕೆ ಸಂಬಂಧಿಸಿದುದಾಗಿದೆ, ಅದುವೆ ರೋಮ್ ಸಾಮ್ರಾಜ್ಯ. ಘಟಸರ್ಪವು ಮೃಗಕ್ಕೆ ಅಧಿಕಾರವನ್ನೂ ಸಿಂಹಾಸನವನ್ನೂ ದೊಡ್ಡ ದೊರೆತನವನ್ನೂ ಕೊಡುತ್ತದೆ. ತಂದೆಯು ಮಗನಿಗೆ (ಕ್ರಿಸ್ತನಿಗೆ) ತನ್ನ ಸಿಂಹಾಸನವನ್ನೂ ಅಧಿಕಾರವನ್ನೂ ಕೊಟ್ಟಂತೆ (ಪ್ರಕ 2:27). ಸೈತಾನನು ಆ ಮೃಗಕ್ಕೆ ಅಧಿಕಾರವನ್ನು ಕೊಟ್ಟು ಭೂಮಿಯ ಮೇಲೆ ತನ್ನ ಪ್ರತಿನಿಧಿಯನ್ನಾಗಿ

ಮಾಡಿಕೊಳ್ಳುತ್ತಾನೆ.

ಪ್ರಕಟನೆ 13:5–7 ರಲ್ಲಿ ಆ ಮೃಗವು ಕ್ರೈಸ್ತ ಇತಿಹಾಸದಾದ್ಯಂತ ಹಿಂಸೆಪಡಿಸುವ ಅವಧಿಯು 42 ತಿಂಗಳುಗಳೆಂದು ತಿಳಿಸುತ್ತದೆ. ದಾನಿಯೇಲ 7:25ನ್ನು ಪ್ರಕಟನೆ 12:13,14 ಹೋಲಿಕೆ ಮಾಡಿದಾಗ ಸ್ತ್ರೀಯು ಒಂದು ಕಾಲ, ಎರಡುಕಾಲ ಮತ್ತು ಅರ್ಧಕಾಲ ಅಂದರೆ ಮೂರುವರೆ ವರುಷಗಳ ಪರ್ಯಂತ ಹಿಂಸೆಗೊಳಗಾಗುವ ಅವಧಿಯು 1260 ವರ್ಷಗಳು. ಒಂದು ಕಾಲವೆಂದರೆ ಒಂದು ವರ್ಷ, ಒಂದು ವರ್ಷಕ್ಕೆ 360 ದಿನಗಳಂತೆ ಮೂರುವರೆ ವರ್ಷಗಳು 1260 ದಿನಗಳಾಗುತ್ತವೆ. ನಾಲ್ವತ್ತೆರಡು ಪ್ರವಾದನೆ ತಿಂಗಳುಗಳು 1 ತಿಂಗಳಿಗೆ 30 ದಿನಗಳಂತೆ 40x30 = 1260 ಪ್ರವಾದನೆ ದಿನಗಳು ಅಂದರೆ 1260 ವರ್ಷಗಳು. ಯೋಹಾನನು ದರ್ಶನದಲ್ಲಿ ಆ ಕೊಂಬು ಗಾಯ ಹೊಂದುವ ಮತ್ತೊಂದು ಘಟನೆಯನ್ನು ನೋಡುತ್ತಾನೆ. ಅಲ್ಲಿಗೆ ಈ ಮೊದಲ ಹಂತವು ಮುಕ್ತಾಯವಾಗುತ್ತದೆ (ಕ್ರಿಶ 538 ರಿಂದ ಕ್ರಿಶ 1798 ರವರೆಗೆ) ಇದರ ಬಳಿಕ ಆ ಮೃಗದ ಗಾಯವು ವಾಸಿಯಾಗುತ್ತದೆ. ಅಂದರೆ ಅದಕ್ಕೆ ಕ್ರಿಶ 1798ರ ನಂತರ ಮತ್ತೆ ಅಧಿಕಾರ ಸಿಗುತ್ತದೆ. ಇದರ ಗಾಯವು ವಾಸಿಯಾದಾಗ ಲೋಕದ ಜನರು ಆಶ್ಚರ್ಯಪಟ್ಟು ಘಟಸರ್ಪವನ್ನೂ ಮತ್ತು ಮೃಗವನ್ನೂ ಆರಾಧಿಸುತ್ತಾರೆ.

**ಸೋಮವಾರ** **ಫೆಬ್ರವರಿ 25**

## ಸಮುದ್ರದ ಮೃಗದ ಚಟುವಟಿಕೆಗಳು

ನಾವು ನಿನ್ನೆಯ ಪಾಠದಲ್ಲಿ ಪ್ರಕಟನೆ 13:5 ರಲ್ಲಿ ಸಭೆಗೆ 42 ತಿಂಗಳುಗಳ ಕಾಲ ತನ್ನ ಕಾರ್ಯವನ್ನು ನಡಿಸುವ ಅವಧಿಯ ಬಗ್ಗೆ ಕಲಿತಿದ್ದೇವೆ. ಇದು 1260 ದಿನಗಳು ನಡೆಯುವ ಹಿಂಸೆಯ ಕಾಲ (ಒಂದು ಪ್ರವಾದನೆ ದಿನವು ಒಂದು ವರ್ಷಕ್ಕೆ ಸಮವಾಗಿರುತ್ತದೆ) (ಅ.ಕಾಂ 14:34, ಯೆಹೆಜ್ಕೇಲ 4:6). 7ನೇ ಪಾಠದಲ್ಲಿ ಮಂಗಳವಾರ ಪಾಠವನ್ನು ನೋಡಿರಿ. ಈ ಪ್ರವಾದನೆ ಅವಧಿಯು ಸಭೆಯು ಪೋಪನ್ನು ತನಗೆ ಮುಖ್ಯಸ್ಥನನ್ನಾಗಿ ಮಾಡಿಕೊಂಡ ವರ್ಷ ಕ್ರಿಶ. 538 ರಿಂದ ಆರಂಭವಾಗುತ್ತದೆ. ಆವಾಗಿನಿಂದ ಕಥೋಲಿಕ ಸಭೆಯು ಪಾಶ್ಚಾತ್ಯ ಲೋಕದ ಮೇಲೆ, ಮಧ್ಯಯುಗದಲ್ಲಿ ತನ್ನ ಅಧಿಕಾರ ನಡೆಸಿತು. ಕ್ರಿಶ 1798ರಲ್ಲಿ

ಫ್ರೆಂಚ್ ಕ್ರಾಂತಿಯು ನಡೆದಾಗ ಮೃಗವು ಗಾಯ ಹೊಂದಿದ ಘಟನೆ ನಡೆಯಿತು. ನೆಪೋಲಿಯನ್ ಚಕ್ರವರ್ತಿಯ ದಂಡನಾಯಕ ಬರ್ತಿಯಾರ್ ಪೋಪನನ್ನು ಹಿಡಿದು ಸೆರೆಗೆ ಹಾಕಿದನು ಪೋಪನು ಸತ್ತನು. ರಾಜ್ಯಾಧಿಕಾರ ಪಡೆದ ಧಾರ್ಮಿಕ ದುರಾಡಳಿತವು ತಾತ್ಕಾಲಿಕವಾಗಿ ಕೊನೆಗೊಂಡಿತು.

**ಪ್ರಕಟನೆ 13:5–8ನ್ನು ದಾನಿ 7:24,25 ಮತ್ತು 2 ಥೆಸ 2:2–12 ರೊಂದಿಗೆ ಹೋಲಿಸಿರಿ.**

ಸಮುದ್ರದಿಂದ ಬಂದ ಮೃಗದ ಕಾರ್ಯಗಳು ಚಿಕ್ಕ ಕೊಂಬಿನ ಮತ್ತು ಅಧರ್ಮಸ್ವರೂಪನ ಕಾರ್ಯಗಳನ್ನು ಬಿಂಬಿಸುತ್ತದೆ. ಸಮುದ್ರದ ಮೃಗದ ಕಾರ್ಯಗಳು ಯಾವ ರೀತಿಯಲ್ಲಿ ಚಿಕ್ಕ ಕೊಂಬಿನ ಮತ್ತು ಅಧರ್ಮ ಸ್ವರೂಪನ ಕಾರ್ಯಗಳನ್ನು ಬಿಂಬಿಸುತ್ತದೆ?

1260 ವರ್ಷಗಳ ಮಧ್ಯಂತರ ಸಮುದ್ರದ ಮೃಗವು ನಡೆಸಿದ ಕಾರ್ಯಗಳನ್ನು ದೇವದೂಷಣೆ ಎಂಬುದಾಗಿ ಕರೆಯಲ್ಪಟ್ಟಿದೆ. ದೇವರೊಂದಿಗೆ ಸಮಾನತೆಯನ್ನು ಸಾಧಿಸಬಯಸುವುದನ್ನು ದೇವದೂಷಣೆ ಎಂದು ಹೊಸ ಒಡಂಬಡಿಕೆಯಲ್ಲಿ (ಯೋಹಾನ 10:33 ಮತ್ತಾಯ 26:63–65 ರಲ್ಲಿ ಸೂಚಿಸುತ್ತದೆ. ದೇವರ ಅಧಿಕಾರವನ್ನು ಕಸಿದುಕೊಳ್ಳುವುದು ದೇವದೂಷಣೆ ಎಂದು ಮಾರ್ಕ 2:7 ಸೂಚಿಸುತ್ತದೆ.

ಸಮುದ್ರ ಮೃಗವು ದೇವರಿಗೆ ವಿರೋಧವಾಗಿ ದೂಷಣೆ ಮಾಡುತ್ತದೆ, ದೇವರ ನಾಮವನ್ನು ದೂಷಿಸುವುದು, ದೇವದರ್ಶನದ ಗುಡಾರವನ್ನೂ, ಪರಲೋಕ ವಾಸಿಗಳನ್ನೂ ದೂಷಿಸುವನು (ಪ್ರಕ 13:6) ದೇವರ ವಾಸಸ್ಥಾನವು ಪರಲೋಕದಲ್ಲಿರುವ ದೇವದರ್ಶನ ಗುಡಾರದಲ್ಲಿ ತಾನೇ ಕ್ರಿಸ್ತನು ತನ್ನ ಸೇವೆಯನ್ನು ನಮ್ಮ ರಕ್ಷಣಾರ್ಥವಾಗಿ ಗೈಯ್ಯುತ್ತಿದ್ದಾನೆ. ಸಮುದ್ರದಿಂದ ಏರಿ ಬಂದ ಮೃಗವು ಯೇಸುಕ್ರಿಸ್ತನ ಮಧ್ಯಸ್ಥಿಕೆಯ ಕಾರ್ಯವನ್ನು ನಿರರ್ಥಕ ಮಾಡುವ ಸಲುವಾಗಿ ಯಾಜಕ ಸ್ಥಾನವನ್ನು ಅಂದರೆ ಮನುಷ್ಯನ ಪಾಪಗಳನ್ನು ಕ್ಷಮಿಸಿ, ರಕ್ಷಣೆಯನ್ನು ಕೊಡುವ ಕೆಲಸವನ್ನು ಮಾನವ ಯಾಜಕನಿಗೆ ವರ್ಗಾಯಿಸುವ ಪ್ರಯತ್ನ ಮಾಡುತ್ತಾನೆ. ದೇವರಿಗೆ ಮಾತ್ರ ಸೇರಿರುವ ಅಧಿಕಾರವನ್ನು ತಾನು

ಭಾವಿಸಿಕೊಳ್ಳುತ್ತಾನೆ. ಇದು ತಾನೆ ದೇವದೂಷಣೆಯ ಸಾರವಾಗಿದೆ.

ಪ್ರಕಟನೆ 13ನೇ ಅಧ್ಯಾಯವು ಕ್ರೈಸ್ತತೆಯಲ್ಲಿ ದೊಡ್ಡ ಧರ್ಮ ಭ್ರಷ್ಟತೆಯ ಕಾಲವನ್ನು ಸೂಚಿಸುತ್ತದೆ. ಇದು ಕಥೋಲಿಕತ್ವವು ದೇವರ ಸ್ಥಾನವನ್ನೂ, ಅಧಿಕಾರವನ್ನೂ ತನ್ನದಾಗಿಸಿಕೊಳ್ಳುತ್ತದೆ. ಅದಕ್ಕೆ ಪೋಪನ್ನು ಮುಖಂಡನನ್ನಾಗಿ ಮಾಡಿಕೊಳ್ಳುತ್ತದೆ. ಯಾರ್‍ಯಾರು ರೋಮಿಗೆ ಒಳಪಡುವುದಿಲ್ಲವೋ ಅವರಿಗೆ ಹಿಂಸೆಯ ಅನುಭವವಾಗುತ್ತದೆ ಮತ್ತು ಅವರು ರಕ್ತಸಾಕ್ಷಿಗಳಾಗುತ್ತಾರೆ. ಈ ಹೇಳಿಕೆಗಳು ಬಹಳ ಒರಟಾಗಿ ಮತ್ತು ಧರ್ಮಾಂಧತೆಯಂತೆ ಕಂಡರೂ ಇತಿಹಾಸವು ಇದಕ್ಕೆ ಸಾಕ್ಷಿಯಾಗಿದೆ. ಯಾರು ಎಷ್ಟೇ ಬಯಸಿದರೂ ಇತಿಹಾಸವನ್ನು ವರ್ತಮಾನ ಕಾಲವು ಅಳಿಸುವುದಕ್ಕಾಗುವುದಿಲ್ಲ.

ಸಭೆಯ ಚರಿತ್ರೆ ಬಗ್ಗೆ ಇರುವ ಪ್ರವಾದನೆಗೆ ನಾವು ನಂಬಿಗಸ್ತರಾಗಿ ಉಳಿಯುವುದು ಹೇಗೆ?

**ಇದೇ ಸಂದರ್ಭದಲ್ಲಿ ಈ ಸತ್ಯಗಳನ್ನು ಇತರರಿಗೆ ಪ್ರಸ್ತುತ ಪಡಿಸುವಾಗ ಎಚ್ಚರಿಕೆಯಿಂದಲೂ ದಯೆಯುಳ್ಳವರಾಗಿಯೂ ಇರಬೇಕು ಹೇಗೆ?**

**ಮಂಗಳವಾರ** **ಫೆಬ್ರವರಿ 26**

## ಭೂಮಿಯಿಂದ ಏರಿಬಂದ ಮೃಗ

ಪ್ರಕಟನೆ 13ನೇ ಅಧ್ಯಾಯದ ಮೊದಲ ಅರ್ಥವು ರೋಮನ್ ಕಥೋಲಿಕ್ ಅಧಿಕಾರವು 1260 ಪ್ರವಾದನೆಯ ವರುಷಗಳಲ್ಲಿ ಸಕ್ರಿಯವಾಗಿರುವುದನ್ನು ವಿವರಿಸುತ್ತದೆ. ಫ್ರೆಂಚ್ ಕ್ರಾಂತಿಯ ಘಟನೆಗಳಿಂದ ಈ ಧಾರ್ಮಿಕ ರಾಜಕೀಯ ವ್ಯವಸ್ಥೆಗೆ ಮಾರಣಾಂತಿಕ ಗಾಯವಾಯಿತು. ಆದಾಗ್ಯೂ ಈ ಮಾರಣಾಂತಿಕ ಗಾಯವು ಕಡೆಯಲ್ಲಿ ಗುಣವಾಯಿತು. ಆವಾಗ ಈ ವ್ಯವಸ್ಥೆಯು ಮತ್ತು ಮರು ಸ್ಥಾಪನೆಯಾಗಿ ಜೀವ ಬಂತು. ಈ ಅಧ್ಯಾಯದ ಎರಡನೆ ಭಾಗವು ಈ ಸಮುದ್ರದ ಮೃಗವು ಹೇಗೆ ಗುಣಹೊಂದಿತು ಎಂಬುದನ್ನು ವಿವರಿಸುತ್ತದೆ.

ಓದಿರಿ : **ಪ್ರಕ 13:11 ಈ ಎರಡನೇ ಮೃಗದ ಗುಣಸ್ವಭಾವಗಳೇನು? ಪ್ರಕ 12:14–16ರ ಸನ್ನಿವೇಶದಲ್ಲಿ ಈ ಮೃಗವು ಭೂಮಿಯಿಂದ ಮೇಲೇರಿ ಬರುವ**

**ಸಂಗತಿಯ ಮಹತ್ವವೇನು?**

ಯೋಹಾನನು ಮತ್ತೊಂದು ಮೃಗವು ಭೂಮಿಯಿಂದ ಹೊರಹೊಮ್ಮುವುದನ್ನು ಗಮನಿಸುತ್ತಾನೆ. ಜಾಗತಿಕ ಪಾರಮ್ಯ ಹೊಂದಿರುವ ಈ ಎರಡನೇ ಮೃಗವು ಮೊದಲನೇ ಮೃಗದಂತೆಯೇ ಪ್ರಭಾವವುಳ್ಳದ್ದಾಗಿರುತ್ತದೆ. ಆದರೆ ಈ ಭೂಮಿಯಿಂದ ಬಂದ ಮೃಗವು ಸಮುದ್ರದಂತೆ ಮೃಗದಂತೆ ಭಯಂಕರವಾಗಿರದೆ ಮೊದಲಿಗೆ ನಿರುಪದ್ರವಿಯಂತೆ ಗೋಚರವಾಗುತ್ತದೆ. ಇದಕ್ಕೆ ಕುರಿಮರಿಗೆ ಇರುವಂತೆ ಎರಡು ಕೊಂಬುಗಳು ಇರುತ್ತದೆ (ಪ್ರಕ 13:11). ಈ ಕುರಿಮರಿಯು ಕ್ರಿಸ್ತನಿಗೆ ಸಂಕೇತವಾಗಿದೆ. ಹಾಗಾಗಿ ಅಂತಿಮಕಾಲದ ಅಧಿಕಾರ ಕ್ರಿಸ್ತನಂತೆ ಗೋಚರವಾಗುತ್ತದೆ.

ಭೂಮಿಯಿಂದ ಮೇಲೇರಿ ಬಂದ ಈ ಅಧಿಕಾರವು ಸ್ತ್ರೀಯನ್ನು ಸಂರಕ್ಷಿಸುತ್ತದೆ, ಸ್ತ್ರೀಯು ದೇವರ ಸತ್ಯಸಭೆಗೆ ಸಂಕೇತವಾಗಿದೆ. 1260 ವರ್ಷಗಳ ಘಟಸರ್ಪದ ಹಿಂಸೆ ಕಾಲದ ಮುಕ್ತಾಯದಲ್ಲಿ ಆ ಸ್ತ್ರೀಯನ್ನು ಸಂರಕ್ಷಿಸುತ್ತದೆ (ಪ್ರಕ 12:14–16).

ಫ್ರೆಂಚ್ ಕ್ರಾಂತಿಯ ಘಟನೆಗಳ ಸಂದರ್ಭದಲ್ಲಿ ಸಮುದ್ರದ ಮೃಗವು ಮಾರಣಾಂತಿಕ ಗಾಯವನ್ನು ಹೊಂದಿದ ನಂತರ ಭೂಮಿಯ ಮೃಗವು (ಆಟಗಾರನಾಗಿ) ಹೊಸದಾಗಿ ಕಾಣಿಸಿಕೊಳ್ಳುತ್ತದೆ. ಅಂದರೆ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುತ್ತದೆ. ಅಂದರೆ ಈ ಭೂಮಿಯ ಮೃಗವು ವಿಶೇಷವಾಗಿ ಅಂತ್ಯಕಾಲದ ಆಟಗಾರನಾಗಿದೆ.

'ನೂತನ ಜಗತ್ತಿನಲ್ಲಿ 1798ರಲ್ಲಿ ಬಲ ಮತ್ತು ಮಹತ್ವಗಳ ಭರವಸೆಯಾಗಿ, ಲೋಕದ ಗಮನವನ್ನು ತನ್ನೆಡೆಗೆ ಸೆಳೆಯುವ ಯಾವ ದೇಶವು ಅಧಿಕಾರಕ್ಕೆ ಬಂದಿತು? ಎಲ್ಲಾ ಸಂಕೇತಗಳನ್ನು ಅದಕ್ಕೆ ಅನ್ವಯ ಮಾಡಿದಾಗ ಪ್ರಶ್ನೆಯೇ ಬರುವುದಿಲ್ಲ. ಒಂದು ದೇಶವು ಒಂದೇ ಒಂದು ದೇಶವು ಪ್ರವಾದನೆಯ ಎಲ್ಲಾ ವಿವರಣೆಗಳನ್ನು ಸಂಧಿಸುತ್ತದೆ ಮತ್ತು ಸ್ಪಷ್ಟವಾಗಿ ಇದು ಅಮೇರಿಕ ಸಂಯುಕ್ತ ಸಂಸ್ಥಾನವೆಂದು ತೋರಿಸುತ್ತದೆ– ಎಲೆನ್ ಜಿ ವೈಟ್ ಮಹಾಹೋರಾಟ ಪುಟ 440.

ಪ್ರಕಟನೆ 13:11 ಈ ಅಮೇರಿಕವು ಅಧಿಕವಾಗಿ ಪ್ರೊಟೆಸ್ಟೆಂಟ್ ಜನಸಂಖ್ಯೆಯಿದ್ದು ರೋಮನ್ ಸಾಮ್ರಾಜ್ಯದಂತೆ ಜಾಗತಿಕ ಪ್ರಭಾವವನ್ನು ಹೊಂದಿದ್ದು ಪಿಶಾಚನಂತೆ (ಘಟಸರ್ಪದಂತೆ) ಕಡೆಯಲ್ಲಿ ಮಾತಾಡುತ್ತದೆ.

ಯಾವ ಮೃಗವು ಮಾರಣಾಂತಿಕ ಗಾಯವನ್ನು ಹೊಂದಿತ್ತೋ ಆ ಮೃಗವನ್ನು ಇಡೀ ಲೋಕವೇ ಆರಾಧಿಸುವಂತೆ ಮಾಡಲು ಅಂತ್ಯಕಾಲದ ಶಕ್ತಿಯು (ಅಮೇರಿಕವು) ಕಾರಣವಾಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಒಂದು ಕಾಲದಲ್ಲಿ ಸಭೆಗೆ ಜಾಗವನ್ನು ಕೊಟ್ಟು ಸಂರಕ್ಷಣೆ ಮಾಡಿದ ಅಮೇರಿಕವು ಕಡೆಯ ಕಾಲದ ಘಟನೆಗಳಲ್ಲಿ ಅದೇ ಸಭೆಯನ್ನು ಹಿಂಸಿಸುವ ಪಾತ್ರವನ್ನು ವಹಿಸುತ್ತದೆ.

**ಪ್ರಕಟನೆ 13ನೇ ಅಧ್ಯಾಯದಲ್ಲಿ ಎರಡನೇ ಮೃಗವು ಅಮೇರಿಕ ಎಂದು ಮೊದಲು ಗುರುತಿಸಲ್ಪಟ್ಟಾಗ್ಯೂ ಅದಕ್ಕೆ ಈವಾಗ ಇರುವಂತೆ ಯಾವ ಅಧಿಕಾರವಾಗಲೀ, ಪ್ರಭಾವವಾಗಲೀ ಇರಲಿಲ್ಲ. ಈ ಸಂಗತಿಯು ಪ್ರವಾದನೆಯಲ್ಲಿ ಚಿತ್ರಿಸಿರುವ ಅಧಿಕಾರವು ಅಮೇರಿಕವೆಂದು ಗುರುತಿಸಿರುವುದನ್ನು ಹೇಗೆ ದೃಢಪಡಿಸುತ್ತದೆ?**

**ಬುಧವಾರ** **ಫೆಬ್ರವರಿ 27**

## ಮೃಗದ ವಿಗ್ರಹ

**ಓದಿರಿ : ಪ್ರಕ 13:12,13. ಬೆಂಕಿಯು ಆಕಾಶದಿಂದ ಇಳಿದು ಬರುವಂತೆ ಯಾದರೂ ಮಾಡುವ ಕುರಿಮರಿಯಂತಹ ಮೃಗದ ವಂಚನೆಯ ಕೃತ್ಯಗಳನ್ನು ಅರ್ಥಮಾಡಿಕೊಳ್ಳಲು 1 ಅರಸು 18:38 ಮತ್ತು ಅ.ಕೃ. 2:3 ಹೇಗೆ ಸಹಾಯ ಮಾಡುತ್ತದೆ?**

ಅದರ ಮಾತುಗಳು ಸತ್ಯವೇದಕ್ಕೆ ಕುರಿಮರಿಯ ಹಾಗೆ ಇರುವ ಮೃಗವು ಅದ್ಭುತವನ್ನು ಮಾಡಿ ಅದರ ಮಾತುಗಳು ಸತ್ಯವೇದಕ್ಕೆ ಅನುಗುಣವಾಗಿ ಇರದಿದ್ದರೂ ಸಹ ನಿಜವೆಂದು ಅನೇಕರನ್ನು ಒಪ್ಪಿಸುತ್ತದೆ. ಬೇತಾಳಿಕತೆಯ ಸಹವರ್ತಿಗಳ ಮುಖಾಮ್ತರ ಅದ್ಭುತಗಳು ಮಾಡಲ್ಪಡುತ್ತವೆ, ರೋಗಿಗಳಿಗೆ

ವಾಸಿಯಾಗುತ್ತವೆ ನಿರಾಕರಿಸಲಾಗದಂತಹ ಅನೇಕ ಅದ್ಭುತಗಳು ಜರುಗಿಸಲ್ಪಡುತ್ತವೆ. ಎಲೆನ್ ಜಿ ವೈಟ್ ಮಹಾಹೋರಾಟ ಪುಟ 588. ಈ ಅದ್ಭುತ ಕುರಿಮರಿ (ಟಗರು) ಯಂತಿರುವ ಮೃಗವು ಭೂನಿವಾಸಿಗಳ ಗಾಯಗೊಂಡ ಮೃಗದ ವಿಗ್ರಹವನ್ನು ಮಾಡಿಕೊಳ್ಳುವ ಹಾಗೆ ಪ್ರೇರಿಸಲು ಸಹಾಯ ಮಾಡುತ್ತದೆ.

ಸಮುದ್ರ ಮೃಗದ ಮಾರಣಾಂತಿಕ ಗಾಯವು ವಾಸಿಯಾಯಿತು ಎಂದರೆ ರೋಮನ್ ಪೇಪೆಸಿ (ಪೋಪತ್ವ) ಧಾರ್ಮಿಕ ರಾಜಕೀಯ ಅಧಿಕಾರದ ಮರುಸ್ಥಾಪನೆಯನ್ನು ಸೂಚಿಸುತ್ತದೆ.

ಕುರಿಮರಿ (ಟಗರು) ಯಂತಹ ಮೃಗವು ಘಟಸರ್ಪದಂತೆ ಮಾತಾಡಲು ತೊಡಗುತ್ತದೆ ಮತ್ತು ಸಮುದ್ರ ಮೃಗದ ಅಧಿಕಾರವನ್ನು ನಡಿಸುತ್ತದೆ. ಇದು ಈ ಸಂಕೇತಗಳಿಂದ ಪ್ರತಿನಿಧಿಸುವ ರಾಷ್ಟ್ರಗಳಂತೆಯೇ ಅಸಹನೆಯುಳ್ಳದ್ದಾಗಿರುತ್ತದೆ.

ಅಂತಹ ಕೃತ್ಯಗಳು ನೇರವಾಗಿ ಈ ಸರ್ಕಾರದ ಸತ್ಯಗಳಿಗೆ ಸ್ವತಂತ್ರವಿರುವ ಸಂಸ್ಥೆಗಳಿಗೆ, ನೇರ ಮತ್ತು ಗಂಭೀರ ಸ್ವಾತಂತ್ರ್ಯದ ಘೋಷಣೆಗೆ ಸಂವಿಧಾನಕ್ಕೆ ವ್ಯತಿರಿಕ್ತವಾಗಿರುತ್ತದೆ. ಆದರೆ ಚಿಹ್ನೆಯಂತೆಯುಳ್ಳ ಅದರ ಕೃತ್ಯಗಳು ಅಸಾಧಾರಣವಾಗಿ ಇರುತ್ತವೆ. ಇದುವೇ ಕುರಿಮರಿಗಿರುವಂತಹ ಕೊಂಬುಗಳುಳ್ಳ ಮೃಗ. ಇದು ಶುದ್ಧವೂ, ಸಾಧುವೂ, ನಿರುಪದ್ರವಿಯೂ ಆಗಿದ್ದು ಘಟಸರ್ಪದಂತೆ ಮಾತಾಡುತ್ತದೆ.

ಭೂನಿವಾಸಿಗಳೆಲ್ಲರಿಗೂ ಮೃಗದ ವಿಗ್ರಹವನ್ನು ಮಾಡಿಸಿಕೊಳ್ಳಲು ಹೇಳುತ್ತದೆ. ಇದು ಸ್ಪಷ್ಟವಾಗಿ ಶಾಸಕಾಂಗದ ಅಧಿಕಾರವು ಜನರ ಮೇಲೆ ಇರುವ ಸರ್ಕಾರವನ್ನು ಪ್ರಸ್ತುತಪಡಿಸುತ್ತದೆ. ಇವೆಲ್ಲವೂ ಪ್ರವಾದನೆಯು ಸೂಚಿಸುವ ಅಮೇರಿಕಕ್ಕೆ ಎದ್ದು ಕಾಣುವ ಪುರಾವೆಯಾಗಿದೆ.

ಆದರೆ ಮೃಗದ ವಿಗ್ರಹವೆಂದರೇನು? ಇದನ್ನು ಹೇಗೆ ಮಾಡುವುದು? ಈ ವಿಗ್ರಹವನ್ನು ಕೊಂಬುಳ್ಳ ಕುರಿಮರಿಯು (ಟಗರು) ಮಾಡುತ್ತದೆ. ಇದು ಮೃಗದ ಪ್ರತಿರೂಪವಾಗಿದೆ. ಇದು ಮೃಗದ ವಿಗ್ರಹವೆಂದು ಕರೆಯಲ್ಪಡುತ್ತದೆ. ಈ ವಿಗ್ರಹವು ಹೇಗಿರುತ್ತದೆ ಮತ್ತು ಇದನ್ನು ಹೇಗೆ ಮಾಡಬೇಕೆಂಬುದಕ್ಕೆ ನಾವು ಮೃಗದ ಅಂದರೆ ಪೋಪತ್ವದ ಗುಣಸ್ವಭಾವಗಳನ್ನು ಅಧ್ಯಯನ ಮಾಡಬೇಕು.

ಆದಿಸಭೆಯು ಸುವಾರ್ತೆಯ ಸರಳತೆಯನ್ನು ಬಿಟ್ಟು ಅನ್ಯಧರ್ಮದ ಸಂಸ್ಕಾರ, ಪದ್ಧತಿಗಳನ್ನು ಅಂಗೀಕಾರ ಮಾಡಿಕೊಂಡಾಗ ದೇವರಾತ್ಮ ಮತ್ತು ಬಲವನ್ನು ಕಳೆದುಕೊಂಡು ಜನರ ಆತ್ಮಸಾಕ್ಷಿಯನ್ನು ನಿಯಂತ್ರಿಸಲು ಲೌಕಿಕ ಬಲದ ಸಹಾಯವನ್ನು ಬಯಸಿತು. ಇದರ ಫಲಿತಾಂಶವಾಗಿ ಬಂದುದ್ದೇ ಪೋಪತ್ವ–ರಾಜ್ಯದ ಅಧಿಕಾರವನ್ನು ನಿಯಂತ್ರಿಸುವ ಮತ್ತು ಆ ಅಧಿಕಾರವನ್ನು ತನ್ನ ಸಲುವಾಗಿ ಉಪಯೋಗಿಸುವ ವಿಶೇಷವಾಗಿ ಪಾಷಾಂಡತೆಗೆ ಶಿಕ್ಷೆ ಕೊಡುವ ಸಭೆ (ಕಥೋಲಿಕ ಸಭೆ).

ಅಮೇರಿಕದ ಪ್ರಮುಖ ಸಭೆಗಳು, ತಮ್ಮಲ್ಲಿರುವ ಸಾಮಾನ್ಯ ಅಂಶಗಳ ಮೇಲೆ ಒಂದಾಗಿ ಸಂಸ್ಥೆಯು ಉಳಿದುಕೊಳ್ಳುವಂತೆ ರಾಜ್ಯದ ಮೇಲೆ ತಮ್ಮ ಕಾನೂನುಗಳನ್ನು ಜಾರಿಮಾಡಿ ಪ್ರಭಾವ ಬೀರುತ್ತದೆ. ಅದರ ಸಲುವಾಗಿ ಪ್ರೊಟೆಸ್ಟೆಂಟ್ ಅಮೇರಿಕವು ರೋಮ್ ಅಧಿಕಾರ ಶ್ರೇಣಿಯ ಒಂದು ವಿಗ್ರಹವನ್ನು ರೂಪಿಸುತ್ತದೆ. ಅದಕ್ಕೆ ಒಪ್ಪದಿರುವವರ ಮೇಲೆ ನಾಗರೀಕ ದಂಡವನ್ನು ಹಾಕಿ ಬಾಧಿಸುತ್ತದೆ.

ಮೃಗದ ವಿಗ್ರಹವು ಭ್ರಷ್ಟ ಪ್ರೊಟೆಸ್ಟೆಂಟತ್ವವನ್ನು ಪ್ರತಿನಿಧಿಸುತ್ತದೆ. ಪ್ರೊಟೆಸ್ಟೆಂಟ್ ಸಭೆಗಳು ನಾಗರೀಕ ಅಧಿಕಾರದ ಸಹಾಯವನ್ನು ಪಡೆಯಲು ಬಯಸುತ್ತವೆ. ಎಲೆನ್ ಜಿ ವೈಟ್ ಮಹಾಹೋರಾಟ 442–445.

**ಗುರುವಾರ** **ಫೆಬ್ರವರಿ 28**

## ಮೃಗದ ಗುರುತು

ಪ್ರಕಟನೆ 13ರಲ್ಲಿ ಕುರಿಮರಿಯಂತಿರುವ ಮೃಗವು ಅಂತ್ಯಕಾಲದ ಬಿಕ್ಕಟ್ಟಿನಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವುದನ್ನು ನೋಡುತ್ತೇವೆ. ಈ ಲೋಕದ ಶಕ್ತಿಯು ಜನರ ನಂಬಿಕೆಗಳನ್ನು ನಿಯಂತ್ರಿಸಲು ಒಂದು ಜಾಗತಿಕ ವ್ಯವಸ್ಥೆಯನ್ನು ಮಾಡುತ್ತದೆ. ಈ ವ್ಯವಸ್ಥೆಯು ಮಧ್ಯಕಾಲದ ಕ್ರೈಸ್ತತ್ವದ ಮೇಲೆ ಪೋಪತ್ವದ ನಿಯಂತ್ರಣದಂತೆಯೇ ಇರುತ್ತದೆ.

**ಪ್ರಕಟನೆ 13:16,17 ನ್ನು ಧರ್ಮ 6:4–8 ಜೊತೆಗೆ ಓದಿರಿ. ದೇವರ ಹತ್ತು ಆಜ್ಞೆಗಳ ಸಂಬಂಧದಲ್ಲಿ ಹಣೆಯ ಮೇಲಾಗಲೀ ಬಲಗೈಯ ಮೇಲಾಗಲಿ ಗುರುತು**

**ಹಾಕಿಸಿಕೊಳ್ಳುವುದು ಎಂದರೇನು?**

ಸಮಾಜದ ಎಲ್ಲಾ ವರ್ಗದ ಜನರು ತಮ್ಮ ಬಲಗೈ ಮೇಲಾಗಲೀ, ಹಣೆಯ ಮೇಲಾಗಲೀ ಗುರುತು ಹಾಕಿಸಿಕೊಳ್ಳುವಂತೆ ಒತ್ತಾಯಿಸಲ್ಪಡುತ್ತದೆ. ಹಣೆಯ ಮೇಲೆ ದೇವರ ಮುದ್ರೆಯನ್ನು ಹಾಕಿಸಿಕೊಂಡವರನ್ನು ತನ್ನ ಜನರು ಎಂದು ದೇವರು ಪರಿಗಣಿಸುವಂತೆ (ಪ್ರಕ 7:3,4, 14:1) ಮೃಗದ ಗುರುತು ಮೃಗವನ್ನು ಆರಾಧಿಸುವವರನ್ನು ಗುರುತಿಸುತ್ತದೆ.

ಮೃಗದ ಗುರುತು ಕಣ್ಣಿಗೆ ಕಾಣಿಸುವಂತಹ ಯಾವ ಚಿಹ್ನೆಯೂ ಅಲ್ಲ. ಗುರುತು ಕೈಯ ಮೇಲಾಗಲೀ ಹಣೆಯ ಮೇಲಾಗಲೀ ಹಾಕಿಸುವುದನ್ನು ಮೋಶೆಯು ಇಸ್ರಾಯೇಲ್ಯರಿಗೆ ಆಜ್ಞೆಗಳನ್ನು ಕೈಯ ಮೇಲೆ ಮತ್ತು ಹಣೆಯ ಮೇಲೆ ಕಟ್ಟಿಕೊಳ್ಳಲು ಹೇಳಿದುದನ್ನು ಹೋಲುತ್ತದೆ (ಧರ್ಮೋ 6:8). ಬಲಗೈಯ ಮೇಲೆ ಕಟ್ಟಿಕೊಳ್ಳುವುದು ನಡವಳಿಕೆಗೆ ಸಂಬಂಧಿಸುತ್ತದೆ ಮತ್ತು ಹಣೆಯ ಮೇಲೆ ಕಟ್ಟಿಕೊಳ್ಳುವುದು ಮನಸ್ಸಿಗೆ ಸಂಬಂಧಿಸುತ್ತದೆ (ಮಾನಸಿಕ ಒಪ್ಪಂದ) ಕೆಲವರು ಮರಣದ ಬೆದರಿಕೆಯಿಂದ ಪಾರಾಗಲು, ಮೃಗದ ಗುರುತನ್ನು ಪಡೆದುಕೊಂಡರೆ ಇನ್ನು ಕೆಲವರು ಆರಾಧನೆಯ ಈ ಭ್ರಷ್ಟ ವ್ಯವಸ್ಥೆಗೆ ಮಾನಸಿಕವಾಗಿ ಮತ್ತು ಆತ್ಮೀಕವಾಗಿ ಪೂರ್ಣ ಬದ್ಧರಾಗಿರುತ್ತಾರೆ.

ಅಂತಿಮ ಬಿಕ್ಕಟ್ಟಿನಲ್ಲಿ ಪ್ರಮುಖವಾದ ವಾದವು ಆರಾಧನೆ ಮತ್ತು ದೇವರ ಆಜ್ಞೆಗಳನ್ನು ಕೈಗೊಳ್ಳಲು ವಿಧೇಯತೆಯ ವಿಷಯವಾಗಿರುತ್ತದೆ (ಪ್ರಕ 14:12). ಸಬ್ಬತ್ತಿನ ಆಜ್ಞೆಯು ನಿರ್ದಿಷ್ಟವಾಗಿ ದೇವರಿಗೆ ನಂಬಿಗಸ್ತಿಕೆ ಮತ್ತು ವಿಧೇಯತೆಗೆ ಪರೀಕ್ಷೆಯಾಗಿರುತ್ತದೆ (ಯೆಹೆಜ್ಕೇಲ 20:12,20) ಹಾಗಾಗಿ ಮೃಗದ ಗುರುತು ಮೃಗಕ್ಕೆ ತೋರುವ ನಿಷ್ಠೆಯ ಚಿಹ್ನೆಯಾಗಿದೆ.

ಮೃಗದ ಗುರುತು ದೇವರ ಆಜ್ಞೆಗೆ ಬದಲಿಯಾದ ಮನುಷ್ಯನ ಆಜ್ಞೆಯನ್ನು ಒಳಗೊಂಡಿರುತ್ತದೆ. ಇದಕ್ಕೆ ದೊಡ್ಡ ಪುರಾವೆ ಯಾವುದೆಂದರೆ ಮಾನವ ಸ್ಥಾಪಿತ ಭಾನುವಾರ ಸಂಸ್ಥೆ. ದೇವರ ವಾಕ್ಯವು ಖಡ್ಡಾಯ ಮಾಡುವ ಸೃಷ್ಟಿಕರ್ತನ 7ನೇ ದಿನದ ಸಬ್ಬತ್ತಿಗೆ ಬದಲಾಗಿರುವ ಆರಾಧನೆ ದಿನ ಭಾನುವಾರ.

ದೇವರ ಅಧಿಕಾರದ ಚಿಹ್ನೆಯನ್ನು ಮತ್ತೊಂದು ದಿನಕ್ಕೆ ಬದಲು ಮಾಡುವ ಪ್ರಯತ್ನವು ದೇವರ ಪಾತ್ರ ಮತ್ತು ಅಧಿಕಾರವನ್ನೇ ಕಿತ್ತುಕೊಂಡಂತೆ.

ಮೃಗದ ಗುರುತು ಎಂದರೆ ಪೋಪತ್ವದ ಸಬ್ಬತ್ತಾಗಿದೆ. ಖೋಟಾ ಸಬ್ಬತ್ತನ್ನು (ನಕಲಿ ಸಬ್ಬತ್ತು) ಜಾರಿ ಮಾಡುವುದಕ್ಕಾಗಿ ಕಾನೂನು ಮಾಡುವಾಗ ಮೂರನೇ ದೂತನ ಗಟ್ಟಿಯಾದ ಸ್ವರವು ಮನುಷ್ಯರನ್ನು, ಮೃಗವನ್ನು ಮತ್ತು ಅದರ ವಿಗ್ರಹವನ್ನು ಆರಾಧಿಸುವ ವಿಷಯದಲ್ಲಿ ಎಚ್ಚರಿಸುತ್ತದೆ. ನಂತರ ಯಾರ್‍ಯಾರು ಉಲ್ಲಂಘನೆಯಲ್ಲಿ ನಿರತರಾಗಿರುತ್ತಾರೋ ಅವರು ಮೃಗದ ಗುರುತನ್ನು ಹೊಂದುತ್ತಾರೆ. ಎಲೆನ್ ಜಿ ವೈಟ್, ಇವ್ಯಾಂಜಲೀಸಮ್, ಪುಟ 234, 235.

ಪ್ರಕಟನೆ 13:18 ಇದರಲ್ಲಿ ಜ್ಞಾನವು ಅಡಕವಾಗಿದೆ, ಬುದ್ಧಿವಂತನು ಅಂಕೆಯನ್ನು ಎಣಿಸಲಿ; ಅದು ಒಬ್ಬ ಮನುಷ್ಯನನ್ನು ಸೂಚಿಸುವ ಅಂಕೆಯಾಗಿದೆ. ಅದರ ಅಂಕೆಯು ಆರುನೂರು ಅರವತ್ತಾರು. ಈ ಮನುಷ್ಯನು ಯಾರು? ಪೌಲನು ಈ ಮನುಷ್ಯನನ್ನು ಅಧರ್ಮಸ್ವರೂಪನು (2 ಥೆಸ 2:3) ಎಂಬುದಾಗಿ ವಿವರಿಸುತ್ತಾನೆ.

ಈ ಪದವಿಯು ಪೋಪನ ಅಧಿಕಾರವನ್ನು ಸೂಚಿಸುತ್ತದೆ. ಇದನ್ನು ಸಮುದ್ರದ ಮೃಗವೆಂಬ ಸಂಕೇತದಿಂದ ಕರೆಯಲಾಗಿದೆ. ಅದರ ಹಣೆಯ ಮೇಲಿರುವ ದೇವದೂಷಣ ಹೆಸರು ಏನೆಂದರೆ ದೈವೀಕ ಬಿರುದನ್ನು ತನಗೆ ಅನ್ವಯಿಸಿಕೊಳ್ಳುವುದು. ಭೂಮಿಯಲ್ಲೂ ದೇವಕುಮಾರನ ಸ್ಥಾನದಲ್ಲಿ ನಿಂತುಕೊಳ್ಳುವುದೇ ಆಗಿದೆ.

ಆಚರಿಸುತ್ತಿರುವ ಒಬ್ಬ ವ್ಯಕ್ತಿಯು ಮೃಗದ ಗುರುತನ್ನು ಹೊಂದಿದ್ದಾನೆ ಎಂಬ ಅರ್ಥವನ್ನು ಕೊಡುವುದಿಲ್ಲ. ದೇವರ ಆರಾಧನೆಯ ದಿನದ ಆಯ್ಕೆಯ ವಿಷಯದಲ್ಲಿರುವ ಪಾದಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಸಹ ಭಾನುವಾರವನ್ನು ಕೈಗೊಳ್ಳುವುದು 'ಮೃಗದ ಗುರುತಾ'ಗುತ್ತದೆ. ವಂಚನೆಗಳಿದ್ದಾಗ್ಯೂ ಜನರು ತಮ್ಮ ಆಯ್ಕೆಯನ್ನು ದೇವರಿಗಾಗಿ ಅಥವಾ ವಿರುದ್ಧವಾಗಿ ಮಾಡುತ್ತಾರೆ. ಆ ಸಮಯವು ಇನ್ನೂ ಬಂದಿಲ್ಲ. ಭವಿಷ್ಯದಲ್ಲಿ ಬರುವಂಥದ್ದಾಗಿದೆ.

ಇನ್ನೂ ಯಾರೂ ಮೃಗದ ಗುರುತನ್ನು ಹೊಂದಿಲ್ಲ. ಪರೀಕ್ಷೆಯ ಸಮಯವು ಇನ್ನೂ ಬಂದಿಲ್ಲ. ಪ್ರತಿಸಭೆಯಲ್ಲೂ ನಿಜ ಕ್ರೈಸ್ತರಿದ್ದಾರೆ ಅವರು ರೋಮನ್ ಕಥೋಲಿಕ ಸಂಸರ್ಗದಲ್ಲಿರುವುದಿಲ್ಲ. ಸಂಪೂರ್ಣವಾಗಿ ಸತ್ಯದ ಬೆಳಕನ್ನು ಮತ್ತು ನಾಲ್ಕನೇ ಆಜ್ಞೆಯನ್ನು ಕೈಗೊಳ್ಳುವ ಬದ್ಧತೆ ಅರಿಯುವವರೆಗೆ ಯಾರೂ ಖಂಡನೆಗೆ ಗುರಿಯಾಗುವುದಿಲ್ಲ. ಆದರೆ ಸುಳ್ಳು ಸಬ್ಬತ್ತನ್ನು ಕೈಕೊಳ್ಳಬೇಕೆಂದು ಕಾನೂನನ್ನು ಜಾರಿಗೆ ತಂದಾಗ ಮೂರನೇ ದೂತನು ಗಟ್ಟಿಸ್ವರದಿಂದ ಮೃಗದ ಮತ್ತು ಅದರ ವಿಗ್ರಹದ ಆರಾಧನೆ ವಿರುದ್ಧ ಎಚ್ಚರಿಕೆಯನ್ನು ಕೊಡುತ್ತಾನೆ. ನಿಜವಾದುದರ ಮತ್ತು ಸುಳ್ಳಾದುದರ ನಡುವೆ ಸ್ಪಷ್ಟವಾದ ಗೆರೆಯು ಎಳೆಯಲ್ಪಡುತ್ತದೆ. ಆವಾಗ ಯಾರು ಇನ್ನೂ ಉಲ್ಲಂಘನೆಯಲ್ಲಿ ಮುಂದುವರೆಯುತ್ತಾರೋ, ಅವರು ಮೃಗದ ಗುರುತನ್ನು ಪಡೆದುಕೊಳ್ಳುತ್ತಾರೆ– ಎಲೆನ್ ಜಿ ವೈಟ್, ಇವ್ಯಾಂಜಲೀಸಮ್, ಪುಟ 234, 235.

ಒಂದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳೋಣ. ಭಾನುವಾರವನ್ನು ಆಚರಿಸುವ ಮನುಷ್ಯನು ಕಳೆದು ಹೋಗುವುದಿಲ್ಲ. ಅಂತೆಯೇ ಸಬ್ಬತ್ತನ್ನು ಕೈಕೊಳ್ಳುವವನು ರಕ್ಷಿಸಲ್ಪಡುವುದೂ ಇಲ್ಲ.

ಮೃಗದ ಗುರುತು ಪ್ರಮುಖವಾದ ವಿವಾದವಾಗುವ ಸಮಯವು ಬರುತ್ತದೆ. ಆವಾಗ ಆರಾಧನೆ ಮಾಡುವ ದಿನವನ್ನು ಆಯ್ಕೆ ಮಾಡುವಾಗ ನಮ್ಮ ನಂಬಿಗಸ್ತಿಕೆಗೆ ಪರೀಕ್ಷೆಯಾಗುತ್ತದೆ.

ಪ್ರಕಟನೆಯು ದೇವಜನರಿಗೆ ಸತ್ಯವೇದವನ್ನು ತೆಗೆದುಕೊಂಡು ತಮ್ಮ ಹೃದಯ ಶೋಧಿಸುವ ಆತ್ಮದೊಂದಿಗೆ ಪ್ರವಾದನೆಯ ಮಾತನ್ನು ಅಧ್ಯಯನ ಮಾಡಿ ಕ್ರಿಸ್ತನನ್ನು ಅರಿಯದವರಿಗೆ ಸುವಾರ್ತೆಯನ್ನು ತಲುಪಿಸಲು ಎಲ್ಲಾ ಪರಿಶ್ರಮವನ್ನು ಮಾಡಬೇಕಾಗಿದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಲೋಕದ ಇಂದಿನ ಸನ್ನಿವೇಶವನ್ನು ಗಮನಿಸಿದಾಗ ಪ್ರಕಟನೆ 13ರ ಪ್ರವಾದನೆ ನೆರವೇರುವಂತೆ ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಯಾವ ತೆರನಾದ ಅಲೆ ಎದ್ದಿದೆ?

2. ಅಂತ್ಯವನ್ನು ಕಾಯುತ್ತಿರುವಾಗ ಇತರ ಕ್ರೈಸ್ತೀಯ ಸಭೆಗಳೆಡೆಗೆ ನಮ್ಮ ಧೋರಣೆ ಏನಾಗಿರಬೇಕು? ಕೆಳಗೆ ಕೊಟ್ಟಿರುವ ಸಲಹೆಯ ಬಗ್ಗೆ ಆಲೋಚಿಸಿರಿ. "ನಮ್ಮ ಸಭೆಯ ಸೇವಕರು ಇತರೆ ಸಭೆಯ ಸೇವಕರ ಸಂಸರ್ಗದಲ್ಲಿರಲು ಬಯಸುವವರಾಗಿರಬೇಕು".

   ಕ್ರಿಸ್ತನು ಯಾರ ಪರವಾಗಿ ಮಧ್ಯಸ್ಥನಾಗಿದ್ದಾನೋ ಅವರಿಗಾಗಿ ಅವರೊಂದಿಗೆ ಪ್ರಾರ್ಥಿಸಿರಿ. ಒಂದು ಗಂಭೀರ ಜವಾಬ್ದಾರಿ ಅವರಿಗಿದೆ. ನಾವು ಕ್ರಿಸ್ತನ ಸಂದೇಶಕರಾಗಿ ಈ ಮಂದೆಯನ್ನು ನೋಡಿಕೊಳ್ಳುವ ಕುರುಬರ ವಿಷಯದಲ್ಲಿ ಆಳವಾದ ಶ್ರದ್ಧಾ ಪೂರ್ವಕವಾದ ಆಸಕ್ತಿಯನ್ನು ತೋರಿಸುವವರಾಗಿರಬೇಕು. ಎಲೆನ್ ಜಿ ವೈಟ್, ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, ಸಂ 6, ಪುಟ 78.

3. ಇತರ ಸಭೆಯ ಜನರೊಂದಿಗೆ ನಾವು ಮೇಲರಿಮೆಯ ಧೋರಣೆ ಅಥವಾ ಅಕ್ರೈಸ್ತ ನಡವಳಿಕೆ (ಆತ್ಮ) ಪ್ರದರ್ಶನವನ್ನು ಹೇಗೆ ತಡೆಗಟ್ಟಬೇಕು?

4. ನಮ್ಮ ನಂಬಿಕೆಗಳನ್ನು ಬಿಟ್ಟು ಬಿಡದೆ ಅವರ ವೈಯಕ್ತಿಕ ನಂಬಿಕೆಗೆ ಗೌರವ ತೋರಿಸುವುದು ಹೇಗೆ?